



ಪದ್ದಿ: ರೀ, ಯಾಕೆ ಕಿರುಚಿಕೊಂಡ್ರಿ. ಏನಾದ್ರೂ ಕೆಟ್ಟ ಕನಸು ಬಿತ್ತಾ?
ಗುಂಡ: ಹೌದು ಕಣೇ
ಪದ್ದಿ: ಕನಸಿನಲ್ಲಿ ದೆವ್ವ ಏನಾದ್ರೂ ಕಾಣಿಸ್ತಾ?
ಗುಂಡ: ಇಲ್ಲ ಕಣೇ ನಾನು ಭಾಷಣಕ್ಕೆ ಹೋಗಬೇಕಿದ್ದ ನಾಳೆಯ ಸಮಾವೇಶದಲ್ಲಿ ಖಾಲಿ ಕುರ್ಚಿಗಳೇ ಕಾಣಿಸಿದವು.




ಗುಂಡ: ಅತ್ಯಂತ ಬುದ್ಧಿವಂತರಲ್ಲಿ ನೀನೂ ಒಬ್ಬಳು.
ಪದ್ದಿ: ನಿಜನಾ? ಅದು ಹೇಗೆ ಹೇಳ್ತಿಯಾ?
ಗುಂಡ: ಇವತ್ತು ಏಪ್ರಿಲ್ ಒಂದಲ್ವಾ? ಇವತ್ತಾದರೂ ಒಂದಷ್ಟು ತಮಾಷೆ ಮಾಡೋಣ ಅಂತ ಹೇಳಿದೆ ಅಷ್ಟೆ!

ಯುವಕ: ಸಾಯೋವರೆಗೆ ನಿನಗೆ ಮೆಸೇಜ್ ಮಾಡ್ತೀನಿ. ಯಾವತ್ತು ನಿನಗೆ ಮೆಸೇಜ್ ಬರಲ್ವೋ ಆ ದಿನ.
ಯುವತಿ: ನಿನ್ನ ಕೊನೆ ದಿನವೇ!
ಯುವಕ: ಅಲ್ಲ ನನ್ನ ಡಾಟಾ ಖಾಲಿ ಆಯ್ತು ಅಂತ ತಿಳಿದುಕೋ!

ಹೆಂಡತಿ: ರೀ, ಮನೆಯನ್ನು ಸ್ವರ್ಗ ಮಾಡ್ತೀನಿ ಅಂತ ಹೇಳಿದ್ರಂತೆ. ಹೌದಾ?
ಪತಿ: ಹೌದು ಕಣೇ ಏನಾಯ್ತು ಈಗ?
ಹೆಂಡತಿ: ನನಗೆ ಡೈವೋರ್ಸ್ ಕೊಡುವ ಯೋಚನೆ ಏನಾದರೂ ಮಾಡಿದ್ದೀರಾ ಹೇಗೆ!

★★★

ಸುಬ್ಬ: ಅಪ್ಪಾ. ನಾವು ಒಂದಕ್ಕಿಂತ ಹೆಚ್ಚು ಮದುವೆ ಆಗಲು ಕಾನೂನು ಯಾಕೆ ಬಿಡುವುದಿಲ್ಲ?
ಮಬ್ಬ: ಆ ಮೂಲಕ ಕಾನೂನು ಗಂಡಸರನ್ನು ರಕ್ಷಿಸುತ್ತಿದೆ. ಅದು ನೀನು ದೊಡ್ಡವನಾದ ಮೇಲೆ ಗೊತ್ತಾಗುತ್ತೆ

ಸಂಗ್ರಹ:
**ಭೋಜರಾಜ ಸೊಪ್ಪಿಮಠ**


